ಕರ್ನಾಟಕ ಸರ್ಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ
ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು 560001

ಸಂಖ್ಯೆ: ಸಿ5(7)ಅ.ಹೊ.ವಾ.ಬೆ/15/2017-18 ದಿನಾಂಕ:03/10/2017

**ತುರ್ತು**

**:ಜ್ಞಾಪನ:**

ವಿಷಯ: ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧೀನ ಕಛೇರಿಗಳಿಗೆ ಹೊಸ ವಾಹನ ಪೂರೈಕೆ ಬಗ್ಗೆ ;
ಉಲ್ಲೇಖ: ಈ ಕಛೇರಿಯಲ್ಲಿ ಕಾಲಕಾಲಕ್ಕೆ ಹೊಸ ವಾಹನ ಪೂರೈಕೆಗೆ ಸಲ್ಲಿಕೆಯಾಗುತ್ತಿರುವ ಬೇಡಿಕೆಗಳು;

------------

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಪ ನಿರ್ದೇಶಕರು (ಆಡಳಿತ) / (ಅಭಿವೃದ್ಧಿ) ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಉಪಯೋಗಕ್ಕಾಗಿ ಇಲಾಖೆಯಿಂದ ಒದಗಿಸಲಾಗಿರುವ ಸರ್ಕಾರಿ ವಾಹನಗಳು ಸಾಕಷ್ಟು ದುರಸ್ಥಿಯಲ್ಲಿದ್ದು, ಈ ಕಛೇರಿಗೆ ಕಾಲಕಾಲಕ್ಕೆ ಹೊಸ ವಾಹನಗಳನ್ನು ಪೂರೈಸುವಂತೆ ಹಲವಾರು ಬೇಡಿಕೆ ಪತ್ರಗಳು ಸ್ವೀಕೃತವಾಗುತ್ತಿರುವ ಹಿನ್ನೆಲೆಯಲ್ಲಿ, ಈ ಬಗ್ಗೆ ಸವಿವರವಾದ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ ಅಗತ್ಯ ಅನುದಾನದ ಬಿಡುಗಡೆಗೆ ಕ್ರಮವಹಿಸುವ ಸಂಬಂಧ **ಬೆಂಗಳೂರು ಆಯುಕ್ತಾಲಯದ ವ್ಯಾಪ್ತಿಗೆ ಒಳಪಡುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಿಗೆ ಸಂಬಂಧಿಸಿದಂತೆ, ಉಪ ನಿರ್ದೇಶಕರ ಕಛೇರಿ (ಆಡಳಿತ/ಅಭಿವೃದ್ಧಿ) ಹಂತದಲ್ಲಿಯೇ ಹಾಗೂ ಧಾರವಾಡ ಹಾಗೂ ಕಲಬುರ್ಗಿ ಆಯುಕ್ತಾಲಯದ ವ್ಯಾಪ್ತಿಗೆ ಒಳಪಡುವ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಕಛೇರಿಗಳಿಗೆ ಸಂಬಂಧಿಸಿದಂತೆ, ಅಪರ ಆಯುಕ್ತರ ಕಛೇರಿಗಳ ಹಂತದಲ್ಲಿಯೇ ಕೆಳಕಂಡ ನಮೂನೆಯಲ್ಲಿ ಮಾಹಿತಿಗಳನ್ನು ಕ್ರೋಢೀಕರಿಸಿ**, ಈ ಕಛೇರಿಗೆ ದಿನಾಂಕ: 24/10/2017 ರೊಳಗೆ ಸಲ್ಲಿಸುವಂತೆ ಸೂಚಿಸಿದೆ.

| ಕ್ರ. ಸಂ | ಕಛೇರಿ ಹೆಸರು ಮತ್ತು ವಿಳಾಸ | ಇಲಾಖೆಯಿಂದ ಒದಗಿಸಲಾಗಿರುವ ವಾಹನದ ಸಂಖ್ಯೆ | ವಾಹನದ ಮಾದರಿ (ಟೈಪ್/ಮೇಕ್) ಖರೀದಿ ವರ್ಷ | ವಾಹನದ ವಸ್ತು ಸ್ಥಿತಿ ? | ಸುಸ್ಥಿತಿಯಲ್ಲಿ ಇಲ್ಲದಿದ್ದಲ್ಲಿ ಆರ್.ಟಿ.ಓ ಕಛೇರಿಯ ವರದಿ ಪಡೆದ ದಿನಾಂಕ | ಇಲಾಖೆಯ ಚಾಲಕರ ಹೆಸರು ಹಾಗೂ ಡಿ.ಎಲ್ ಸಂಖ್ಯೆ |
|---|---|---|---|---|---|---|
| | | | | | | |

(ಎಸ್.ಕಾತ್ಯಾಯನಿ ದೇವಿ)
ಜಂಟಿ ನಿರ್ದೇಶಕರು (ಆಡಳಿತ)

ಇವರಿಗೆ ಮುಂದಿನ ಅಗತ್ಯ ಕ್ರಮಕ್ಕಾಗಿ :

1) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಬನಶಂಕರಿ, ಬೆಂಗಳೂರು.
2) ಬೆಂಗಳೂರು ಆಯುಕ್ತಾಲಯ ವ್ಯಾಪ್ತಿಯ ಎಲ್ಲಾ ಉಪ ನಿರ್ದೇಶಕರು (ಆಡಳಿತ / ಅಭಿವೃಧಿ)
3) ಅಪರ ಆಯುಕ್ತರು, ಸಾ.ಶಿ.ಇಲಾಖೆ, ಧಾರವಾಡ, ಧಾರವಾಡ ಜಿಲ್ಲೆ.
4) ಅಪರ ಆಯುಕ್ತರು, ಸಾ.ಶಿ.ಇಲಾಖೆ, ಕಲಬುರ್ಗಿ, ಕಲಬುರ್ಗಿ ಜಿಲ್ಲೆ.
5) ಕಛೇರಿ ಪ್ರತಿ.